Regd No BG 155

— ೫೯ —

23—3—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ ವ.ಃಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ರಾಣಿ ವಿಕ್ಟೋರಿಯಾರವರ ವಿಷಯ

ವಿಕ್ಟೋರಿಯಾ ಮಹಾರಾಣಿ ಮತ್ತು ಅವರ ಪತಿ ಅಲ್ಬರ್ಟರಿಗೂ ಒಂದು ಸಾರಿ ಭಾರಿ ಜಗಳವಾದನಂತರ, ಅಲ್ಬರ್ಟರು ತಮ್ಮ ಕೊಠಡಿಗೆ ಹೋಗಿ, ಭದ್ರವಾಗಿ ಬಾಗಿಲನ್ನು ಹಾಕಿಕೊಂಡರು

ಸ್ವಲ್ಪ ಹೊತ್ತಾದನಂತರ ಬಾಗಲು ಜೋರಾಗಿ ಬಡಿಯಲ್ಪಟ್ಟಿತು.

ಯಾರದು, ಎಂದರು ಅಲ್ಬರ್ಟ್.

ಬಾಗಲು ತೆಗಿ, ನಾನು ವಿಕ್ಟೋರಿಯಾ, ಇಂಗ್ಲೆಂಡಿನ ಮಹಾರಾಣಿ, ಎಂದು ಉತ್ತರ ಬಂತು.

ಹೀಗೇ ಮಾತು ಕತೆ ನಡೆಯಿತು

ಕಡೆಗೆ ಮತ್ತೆ ಬಾಗಲು ಮೆಲ್ಲಗೆ ಬಡಿಯಲಾಯಿತು

ಯಾರದು ಎಂದರು ಅಲ್ಬರ್ಟ್

ನಾನು, ನಿನ್ನ ಪತ್ನಿ, ಎಂದು ನಿಧಾನವಾಗಿ ಹೇಳಿದರು ವಿಕ್ಟೋರಿಯಾ

★

ಅಣು ಭಸ್ಮದಿಂದ

ಅಣು ಭಸ್ಮ ಪತನದಿಂದ ಉಂಟಾಗುವ ಗಂಡಾಂತರಗಳು ಪುರುಷರಿಗಿಂತ ಸ್ತ್ರೀಯರನ್ನು ಸೇಕಡಾ ಇಪ್ಪತ್ತರಷ್ಟು ಕಡಿಮೆ ಬಾಧಿಸುವುದೆಂದು ಪಶ್ಚಿಮ ಜರ್ಮನಿಯ ತಜ್ಞರೊಬ್ಬರು ಕಂಡುಹಿಡಿದಿದ್ದಾರೆ : ನಿರೋಗಿಯಾಗಿರುವವರು ಅಂತಹ ಅನಿಷ್ಟಗಳಿಗೊಳಗಾದರೂ ಶೀಘ್ರದಲ್ಲಿಯೇ ಗುಣಹೊಂದುವರು ಎಂಬುದೂ ತಿಳಿದುಬಂದಿದೆ ; ಅಣುಭಸ್ಮ ಪತನದಿಂದ ದೇಹದ ಬೆಳವಣಿಗೆಗೆ ಯಾವುದಾದರೂ ವಿಧದಲ್ಲಿ ತೊಂದರೆಯುಂಟೇ ಎಂಬುದನ್ನು ಇನ್ನೂ ಕಂಡುಹಿಡಿಯಲಾಗಿಲ್ಲ.

★

ಅಂಚೆಚೀಟಿ ಪ್ರದರ್ಶನ

ಪ್ಯಾರಿಸ್— ಆಗಸ್ಟ್ 18 ರಿಂದ ಸೆಪ್ಟೆಂಬರ್ 2 ರವರೆಗೆ ಜಾಗತಿಕ ಅಂಚೆಚೀಟಿ ಪ್ರದರ್ಶನವು ನಡೆಯುವುದು ; ಇದುಲ್ಲಿ ಭಾಗವಹಿಸುವುದಕ್ಕಾಗಿ 71 ದೇಶಗಳಿಂದ ಈಗಾಗಲೇ ಅರ್ಜಿಗಳು ಬಂದಿವೆ.

ವಿವಿಧ ವಿಷಯಗಳು

ನವದೆಹಲಿ 21— 1960 ರ ಜುಲೈ ಮುಷ್ಕರದಲ್ಲಿ ಭಾಗವಹಿಸಿದ 136 ಸರ್ಕಾರಿ ನೌಕರರನ್ನು ಪಲಸದಿಂದ ವಜಾ ಮಾಡಲಾಗಿದೆ : 61 ಮಂದಿ ಹಂಗಾಮಿ ನೌಕರರನ್ನು ಕೆಲಸದಿಂದ ಮುಕ್ತಗೊಳಿಸಲಾಗಿದೆ ; 11 ಮಂದಿಗೆ ಬಡ್ತಿಯಿಂದ ನಿವೃತ್ತಿಗೊಳಿಸಲಾಗಿದೆ ; 18 ಮಂದಿ ನೌಕರರು ಸಸ್ಪೆಂಡಿನಲ್ಲಿದ್ದು ಅವರ ಬಗೆಗೆ ಇಲಾಖಾ ಮೂಲಕ ತನಿಖೆ ನಡೆಯುತ್ತಿದೆ— ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ನವದೆಹಲಿ— ಕಳೆದ ವಾರ ಫ್ರಾಂಕ್‌ಫರ್ಟ್ ಮುನಿಸಿಪಲ್ ಅಧ್ಯಕ್ಷ ಬೆಕಲ್ ಪೇಟ್. ಫ್ರಾಂಕ್‌ಫರ್ಟ್ ಸ್ವತಂತ್ರ ನಗರವಾಗಿದ್ದಾಗಿನ 1948 ರ ಹಳೇ ಬೆಳ್ಳೀ ನಾಣ್ಯವನ್ನು ದೆಹಲಿ ಪೌರರಿಗೆ ಬಹುಮಾನಿಸಿದರು — ದೆಹಲಿ ಮೇಯರರು ಮತ್ತು ಅವರ ಪತ್ನಿಯರು ಬೆಕಲ್ಟ್ ಮತ್ತು ಅವರ ಪತ್ನಿಯವರಿಗೆ ಸತ್ಕಾರ ನಡೆಸಿದರು.

ನವದೆಹಲಿ 21— ಲೋಕಸಭಾ ಸಚಿವಾಲಯ ಮಾರ್ಚ್ 26 ರಿಂದ ಏಪ್ರಿಲ್ 1 ರವರೆಗೆ ಪಾರ್ಲಿಮೆಂಟರಿ ವಸ್ತು ಪ್ರದರ್ಶನವನ್ನು ವ್ಯವಸ್ಥೆಗೊಳಿಸುವುದು.

ಬೆಂಗಳೂರು 22— ವೈಟ್‌ಫೀಲ್ಡ್ ಜಿಲ್ಲೆಯ ಹೂಡಿ ಸೀಮೆಯಲ್ಲಿ ಏಪ್ರಿಲ್ 16 ರಿಂದ ಮೇ 15 ರವರೆಗೆ ಲೋಕಸಹಾಯಕ ಸೇನಾ ಶಿಬಿರವೊಂದು ನಡೆಯುತ್ತದೆ.

ನವದೆಹಲಿ 21— ಯಾವ ಭಾರತೀಯರೂ ಬ್ರಿಟನ್ನಿಗೆ ವಲಸೆ ಹೋಗಲು ಭಾರತ ಸರ್ಕಾರ ಬಯಸದೆಂದು ನೆಹರೂ ರಾಜ್ಯ ಸಭೆಯಲ್ಲಿ ತಿಳಿಸಿದರು.

೦೦

ಶಾಲೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪಕ್ಕಯ್ಯಪ್ಪ ಜೋಯಿಸರಿಂದ
24 ಶನಿವಾರ ತದಿಗೆ ಶ್ವಾತಿ
ಸಂಕಷ್ಟ ಚತುರ್ಥಿ

ಮೈಸೂರು ರಾಜ್ಯದಲ್ಲಿ ಮೊದಲ ಬಜೆಟ್

ಕೊಪ್ಪೆಗುಡಿಯಂನಲ್ಲಿ ಗೋಳೀಬಾರ್

ಹೈದರಾಬಾದು 22— ಖಮ್ಮಾಂ ಜಿಲ್ಲೆಯ ಕೊಥಗುಡಿಯಮ್ಮಿ ಕಲ್ಲಿಜ್ಜಲು ಗಣಿ ಕೆಲಸಗಾರರ ಎಂಡು ಗುಂಪುಗಳಿಗೆ ಘರ್ಷಣೆಯಾಗಿ, ಅವರನ್ನು ಚದುರಿಸ ಪೋಲೀಸರು ಗುಂಡುಹಾರಿಸಿದರು — ಘರ್ಷಣೆಯಲ್ಲಿ 3 ಮಂದಿ ಸತ್ತರೆಂದೂ ಪೋಲೀಸರ ಗುಂಡಿನೇಟಿನಿಂದ 4-5 ಮಂದಿ ಸತ್ತರೆಂದೂ ಹೇಳಲಾಗಿದೆ.

★

ಲಂಡನ್ನಿನ ವಾರ್ತೆಯಂತೆ, ಬ್ರಿಟನ್ನು ಬ್ಯಾಂಕ್ ದರ ಶೇಕಡ 5 ಕ್ಕೆ ಇಳಿಸಲಾಗಿದೆ — ನವದೆಹಲಿಯಲ್ಲಿ ಇದು ಸಂತೋಷವನ್ನುಂಟುಮಾಡಿದೆ.

೦೦

ಹೈದರಾಬಾದು 22— ಆಂಧ್ರದಲ್ಲಿ ರೂ. 2-13 ಕೋಟಿ ಖೋತಾ ಬಜೆಟ್ಟನ್ನು ಮಂಡಿಸಲಾಗಿದೆ

೦೦

ರಾವಲ್ಪಿಂಡಿ— ತಾಳ್ಮೆ ಸಂ || ನೆಹರೂರೊಡನೆ ಮಾತುಕತೆ ನಡೆಸುವುದಕ್ಕೆ ಮುಂಚೆ, ಕಾಶ್ಮೀರ ಸಂಬಂಧಿಸಿದ ಅಧಿಕಾರಿಗಳು ಅಥವಾ ಮಂತ್ರಿಗಳು ಪೂರ್ವಭಾವಿ ಮಾತುಕತೆ ನಡೆಸಬೇಕೆಂದು ಅಧ್ಯಕ್ಷ ಅಯೂಬರು ಹೇಳಿದರು.

೦೦

ಮನೆಗಳನ್ನು ಸುಟ್ಟರು

ಕಳೆದ ವಾರ ಉತ್ತರ ಕಾಚಾರ ಬೆಟ್ಟಗಳಲ್ಲಿನ ಅರು ಕಜೇರಿಗ್ರಾಮದಲ್ಲಿ 190 ಮನೆಗಳನ್ನು ಎರೋಫ್ಲಾ ನಾಗಾಗಳು ಸುಟ್ಟು ನೆಲಸಮ ಮಾಡಿದರು

ಬೆಂಗಳೂರು 22— ಹಣಕಾಸಿನ ಶಾಖೆಯ ಚಾರ್ಜಿನಲ್ಲಿರುವ ಮುಖ್ಯ ಮಂತ್ರಿ ಶ್ರೀ ಕಂಠಿಯವರು ಇಂದು ಶಾಸನಸಭೆಯಲ್ಲಿ 62-63 ರ 322-63 ಲಕ್ಷ ರೂ. ಖೋತಾ ಬಡ್ಜೆಟ್ಟನ್ನು ಮಂಡಿಸಿದರು — ಬಡ್ಜೆಟ್ಟಿನಲ್ಲಿ ರೂ 9970-86 ಲಕ್ಷ ಆಯ ರೂ 10293-49 ವ್ಯಯ ನಿರೀಕ್ಷಿಸಲಾಗಿದೆ — ಹೊಸ ತೆರಿಗೆಗಳು ವಿಧಿಸದಿದ್ದರೂ ಅವು ಬರುವ ಸೂಚನೆಯಿದೆ — ರಿಸರ್ವ್ ಬ್ಯಾಂಕಿನೊಡನೆ ಸರ್ಕಾರ ಮಾಡಿಕೊಂಡಿರುವ ಒಪ್ಪಂದದಂತೆ 6 ಕೋಟಿ ರೂ. ಸಾರ್ವಜನಿಕ ಸಾಲ ಎತ್ತಲಾಗುವುದು — ರಾಜ್ಯದ ಹಣಕಾಸಿನ ಸ್ಥಿತಿ ದೃಷ್ಟ್ಯಾಯಿಂದ ಪ್ರಾಸನಿರೋಧ ನೀತಿಯನ್ನು ಮುಂದೆ ಎಚ್ಚರಿಸುವುದನ್ನು ಕ್ರಮೇಣ ಕೈಗೊಳ್ಳುವುದು ಅಗತ್ಯವಾಗಿದೆಯೆಂದೂ ತಿಳಿಸಲಾಗಿದೆ.

★

ಕಲ್ಕತ್ತಾ 22— ಇಂಡೋ-ಪಾಕ್ ಗಡಿಯಲ್ಲಿ ಪಶ್ಚಿಮ ದಿನಾಜಪುರ ಜಿಲ್ಲೆಯಲ್ಲಿ ಪಾಕಿಸ್ತಾನ ಸೈನಿಕರು ಕಂದಕಗಳನ್ನು ತೋಡುತ್ತಿರುವರೆಂದು ತಿಳಿಯಬಂದಿದೆ.

★

ಬೆಂಗಳೂರು 22— ಭೂಮಿ ಮತ್ತು ಕಟ್ಟಡಗಳ ಮೇಲೆ ಗಿಫ್ಟ್ ಟ್ಯಾಕ್ಸ್ ಹಾಕುವುದು ರಾಜ್ಯಾಂಗ ವಿರುದ್ಧವೆಂದು ಹೈ ಕೋರ್ಟು ತೀರ್ಪಿತ್ತಿತು

★

ಕಲ್ಕತ್ತಾ 22— ಡಂಡಂ ವಿಮಾನ ನಿಲ್ದಾಣದಲ್ಲಿಳಿದ ಬ್ಯಾಂಕಾಕಿನಿಂದ ಬಂದಿಳಿದ ಭಾರತೀಯ ಪ್ರಯಾಣೀಕರೊಬ್ಬನು ಅಕ್ರಮವಾಗಿ ತಂದಿದ್ದ 300 ತೊಲ ಚಿನ್ನವನ್ನು ಕಸ್ಟಮ್ಸಿನವರು ವಶಪಡಿಸಿಕೊಂಡರು.

ಜೀವವಿಮಾ ಕಾರ್ಪೊರೇಷನ್ನಿನ ಪ್ರಗತಿ

1961 ರ ಹೊಸ ವ್ಯವಹಾರ ರೂ 608 ಕೋಟಿಗಳಿಗೂ ಏರಿದೆ

ಜೀವ ವಿಮಾ ಕಾರ್ಪೊರೇಷನ್ನಿನ ಪ್ರಗತಿ ಭಂದಿಂದ ಸಾಗುತ್ತಿದೆ : ಇದರ 1961 ರ ವ್ಯವಹಾರ ಮಂಚಿನ ಪರ್ವಕ್ಕಿಂತಲೂ ಅತಿ ಹೆಚ್ಚಾಗಿರುತ್ತದೆ : 1961 ರ ಹೊಸ ವ್ಯವಹಾರ 1960 ಕಿಂತ ಸೇಕಡಾ 22-3 ರಷ್ಟು ಅಧಿಕವಾಗಿರುತ್ತದೆ : 1960 ರ ವ್ಯವಹಾರ ರೂ 497-54 ಕೋಟಿಗಳಾಗಿದ್ದು, ಇದು 1959 ಕ್ಕಿಂತ ಸೇಕಡಾ 15-9 ರಷ್ಟು ಹೆಚ್ಚಾಗಿತ್ತು : 1961 ರ ಒಟ್ಟು ಹೊಸ ವ್ಯವಹಾರ (ಎಸ್ಯುಟೀ ಮೊಗಳನ್ನು ಬಿಟ್ಟು) ರೂ 608751000 ಆಗಿರುತ್ತದೆ.

ಕಾರ್ಪೊರೇಷನಿಗೆ 1961 ಒಂದು ಕಷ್ಟಕರವಾದ ಪರ್ವವೆಂದು ತೋರಿಬರಬಾರದಾಗಿತ್ತು ; ಯಾಕೆಂದರೆ ನೆರೆಹಾವಳಿ ಮತ್ತು ಇತರ ಉಪದ್ರವಗಳಿಂದ ಕಷ್ಟಕರವೆಂದು ಕಂಡುಬರಲಾಗಿತ್ತು : ಆದರೂ ಕಾರ್ಪೊರೇಷನಿಗೆ ರೂ 702-93 ಕೋಟಿಗಳಷ್ಟು ವ್ಯವಹಾರವನ್ನು ತಂದಾಗಿತ್ತು, ಇದರಲ್ಲಿ ಕೂಡ 608-75 ಕೋಟಿಗಳಷ್ಟು ವ್ಯವಹಾರವನ್ನು ಪೂರೈಸಲಾಗಿದೆ.

ಹೊಸ ಪಾಲಿಸಿದಾರರಿಗೆ ಅತಿ ಹೆಚ್ಚಾಗಿ ಮಾರಾಟ ಮಾಡಿದ ಡಿವಿಜನ್ನುಗಳಲ್ಲಿ ಮಧುರೈ ಡಿವಿಜನ್ನು ಪ್ರಥಮ ಸ್ಥಾನಗಳಿಸಿರುತ್ತದೆ

ನವೆಂಬರ 30, 1961 ರವರೆಗೆ ಸರಾಸರಿ 284 ತಾವಿನ ಪಾಲಿಸಿಗಳನ್ನು (ಅಂದರೆ ಒಟ್ಟು ಮಾರಾಟ ಮಾಡಿದ ಪಾಲಿಸಿಗಳ ಶೇಕಡ 34-6 ರಷ್ಟು) ವೈದ್ಯಕೀಯ ಪರೀಕ್ಷೆ ಇಲ್ಲದ ಯೋಜನೆಗಳ ಮೂಲಕ ಮಾರಾಟ ಮಾಡಲಾಗಿದೆ

ಕಾರ್ಪೊರೇಷನಿನ ಐದು ವಲಯಗಳಲ್ಲಿ ದಕ್ಷಿಣ ವಲಯವು ರೂ 151-68 ಕೋಟಿಗಳಷ್ಟು ವ್ಯವಹಾರವನ್ನು ಮಾಡಿ ಪ್ರಥಮ ಸ್ಥಾನ ಪಡೆದಿದೆ.

ಕಾರ್ಪೊರೇಷನಿನ ಡಿವಿಜನುಗಳಲ್ಲಿ ಕಲ್ಕತ್ತಾ ಡಿವಿಜನು 1961 ರಲ್ಲಿ ರೂ. 65-02 ಕೋಟಿಗಳಷ್ಟು ವ್ಯವಹಾರವನ್ನು ಮಾಡಿ ಪ್ರಥಮ ಸ್ಥಾನ ಪಡೆದಿರುತ್ತದೆ

ಕಾರ್ಪೊರೇಷನು ತನ್ನ ಚಟುವಟಿಕೆಗಳನ್ನು ವಿಸ್ತರಿಸಲು ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿರುತ್ತದೆ ; 1961 ರ ಕೊನೆಯಲ್ಲಿ 440 ಬ್ರಾಂಚ್ ಆಫೀಸುಗಳು ಮತ್ತು ಸಬ್ ಬ್ರಾಂಚು ಆಫೀಸುಗಳು ಮತ್ತು 133 ಡೆವಲಪ್ಮೆಂಟು ಸೆಂಟರುಗಳು ಇದ್ದು ಕಾರ್ಪೊರೇಷನಿನ ಅಡಳಿತದಲ್ಲಿ ಜೀವವಿಮಾ ಮಾರಾಟತನದ ಕೆಲಸವನ್ನು ಮುಂದುವರಿಸುತ್ತದೆ

ಕಾರ್ಪೊರೇಷನಿನ ಒಟ್ಟು 573 ಆಫೀಸುಗಳಲ್ಲಿ (1961 ರ ಕೊನೆಯಲ್ಲಿ) 163 ಆಫೀಸುಗಳು ಮೊತ್ತ ಒಂದು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರುವ ಪಟ್ಟಣಗಳಲ್ಲಿ ಇರಲಾಗಿತ್ತು : 1962 ರ ಕೊನೆಯಲ್ಲಿ 532 ಬ್ರಾಂಚು ಮತ್ತು ಸಬ್ ಬ್ರಾಂಚು ಆಫೀಸುಗಳೂ ಮತ್ತು 187 ಡೆವಲಪ್ಮೆಂಟು ಆಫೀಸುಗಳು ಇರಬಹುದೆಂದು ತಿಳಿಯಲಾಗಿದೆ

1961 ರಲ್ಲಿ ಏಜೆಂಟರ ಸಂಖ್ಯೆಯು 139821 ರಿಂದ 154261 ಕ್ಕೆ ಏರಿರುತ್ತದೆ, ಮತ್ತು ಫೀಲ್ಡ್ ಆಫೀಸರ ಸಂಖ್ಯೆ 5754 ರಿಂದ 7008 ಕ್ಕೆ ಏರಿರುತ್ತದೆ.

1961 ರಲ್ಲಿ ರೂ 1063986 ಮೌಲ್ಯದ 781 ಡಿಫರ್ಡ್ ಎನ್ಯುಟೀಸ್ ಮತ್ತು ರೂ 419709 ಮೌಲ್ಯದ 179 ಇಮ್ಮಡಿಯೆಟ್ ಎನ್ಯುಟೀಸುಗಳನ್ನು ಕೊಡಲಾಗಿದೆ

ಇದಲ್ಲದೆ 1961 ರಲ್ಲಿ ಕಾರ್ಪೊರೇಷನು ಗ್ರೂಪ್ ಮತ್ತು ಸೂಪರೆನ್ಯುವೇಶನ್ ಯೋಜನೆಗಳ ಮೂಲಕ ವಾರ್ಷಿಕ ರೂ 727011 ಮೌಲ್ಯದ 552 ಡಿಫರ್ಡ್ ಎನ್ಯುಟೀಸುಗಳನ್ನು ಕೊಟ್ಟಿರುತ್ತದೆ

1961 ರಲ್ಲಿ ದೇಶದ ಎಲ್ಲಾ ಕಡೆಯಲ್ಲಿಯೂ ವೈದ್ಯಕೀಯ ಪರೀಕ್ಷೆಯಿಲ್ಲದ ಯೋಜನೆಗಳನ್ನು ಜಾರಿಗೆ ತರಲಾಗಿತ್ತು, ಮತ್ತು ಪೌರ ವಿಮಾನಯಾನ (civil aviation) ಮತ್ತು ವೈಮಾನಿಕ ದಳದ (Air Force) ನೌಕರರು ಕೊಡಬೇಕಾದ ಪ್ರೀಮಿಯಂಗಳ ವೇಳೆ ಹೊರಿಸಿರುವ ಅಧಿಕ ಹಣವನ್ನು ಕಡಮೆಮಾಡಲಾಗಿರುತ್ತದೆ ; ಕೆಲವು ತಂಗುತಿಗಳಲ್ಲಿರುವ ಸೇನಾದಳಗಳಿಗೆ ನೋ-ಮೆಡಿಕಲ್ ವ್ಯವಹಾರದ ಮಿತಿಯನ್ನು ರೂ 10000 ಕ್ಕೆ ಏರಿಸಲಾಗಿದೆ.

ಮುಂಬಯಿ, ಕಲ್ಕತ್ತ, ಹೈದರಾಬಾದ ಮತ್ತು ಭೋಪಾಲ್, ಈ ಸ್ಥಳಗಳಲ್ಲಿ ವಲಯದಿಂದ ಮನೆಗೆ ಹೋಗಿ ಜನತೆಯಿಂದ ಜೀವ ವಿಮೆಯ ಬಗ್ಗೆ ಹಲವಾರು ವಿಷಯಗಳನ್ನು ಪರಿಗಣಿಸಲಾಗಿತ್ತು, ಉತ್ತರ ಮತ್ತು ದಕ್ಷಿಣ ವಲಯಗಳಲ್ಲಿ ಆಗೆಲ್ಲಾಗಲೇ ಪಾಲಿಸಿಗಳನ್ನು ಕೊಡುವ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೆ ತರಲಾಗಿದೆ.

Our Bangalore Sales Depot address—
71 / 4 Arcot Sreenivasachar St., Bangalore 2.

ವುಡ್‌ಲ್ಯಾಂಡ್ಸ್ ವೈಭವ 7 ನೇ ವಾರ

ಜಂಗ್ಲಿ (ಹಿಂದಿ) **Junglee**

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ- ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— 23-3-62 ರಿಂದ

ಶಾರದ (ತಮಿಳು) ಹೊಸ ಚಿತ್ರ

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ ಎಸ್ ಎಸ್ ರಾಜೇಂದ್ರನ್
ಸಾವಿತ್ರಿ, ಎಂ ವಿ ರಾಜಮ್ಮ ಸಂಧ್ಯ, ಮುಕ್ತಾಲಕ್ಷ್ಮಿ

ರಾಜಧಾನಿಯಲ್ಲಿ ಪ್ರಪ್ರಥಮ ಪ್ರದರ್ಶನ [ದಿನವಹಿ 3 ಆಟಗಳು]

SHAKTI
SUDHA

A Superb Tonic

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.